# ಸಭೆಯ ಬರೋಣ

ಮೆಸ್ಸೀಯನಲ್ಲಿ ದೇವರು ಮಾಡಿರುವ ವಾಗ್ದಾನದ ಕೃಪೆಯ ಕುರಿತು ಪ್ರಮುಖ ಸಂಗತಿಯು ಅಪೊಸ್ತಲರ ಕೃತ್ಯದಲ್ಲಿ ಆಶ್ಚರ್ಯವುಂಟುಮಾಡುತ್ತದೆ. ಅನೇಕ ಯುಗಗಳ ಹಿಂದೆ ಮಾಡಿದ ವಾಗ್ದಾನಗಳನ್ನು ಇದರಲ್ಲಿ ಈಡೇರಿಸಿದ್ದು, ಅದು ದೇವರು ಮತ್ತು ಮನುಷ್ಯನ ಸಂಬಂಧದಲ್ಲಿ ಯಾವಾಗಲೂ ಉಳಿಯುವಂಥದ್ದಾಗಿದೆ. ಈ ವಿಧವಾದ ಆಶೀರ್ವಾದವನ್ನು ಅವಕಾಶವನ್ನು ಹಾಗೂ ದೇವರೊಂದಿಗಿನ ಸಂಬಂಧವನ್ನು ಮನುಷ್ಯನ್ನು ಹಿಂದೆಂದೂ ಹೊಂದಿರಲಿಲ್ಲ.

ಈ ಆಶೀರ್ವಾದವು ಸಭೆಯೇ ಆಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ ಯೇಸು ಮಾಡಿದ ವಾಗ್ದಾನದಲ್ಲಿ "ಸಭೆ" ಎಂಬ ಪದವು ಪ್ರಥಮವಾಗಿ ದಾಖಲಾಗಿರುತ್ತದೆ, "ನನ್ನ ಸಭೆಯನ್ನು ಕಟ್ಟುವೆನು" (ಮತ್ತಾಯ 16:18). ಅಪೊಸ್ತಲರ ಕೃತ್ಯಗಳು 5:11ರಲ್ಲಿ ಈ ಪದವನ್ನು ಪ್ರಥಮ ವಾಗಿ ಬಳಸಲಾಗಿದೆ; "ಸಭೆಯಲ್ಲಿ ಮಹಾ ಭಯವು ಉಂಟಾಯಿತು" 2:47 KJVಯಲ್ಲಿ ಪುರಾತನ ಕಾಲದ ಅಂಗ್ಲಾ ಭಾಷೆಯನ್ನು ಬಳಸಿ "ಸಭೆ" ಎಂದಿದ್ದರೂ (ಮಂಡಲಿ), ಮೂಲ ಗ್ರೀಕ್ ಭಾಷೆಯಲ್ಲಿ ಆ ಪದವಿರುವದಿಲ್ಲ. KJVಯಲ್ಲಿ "ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು[1] ಅವರ ಮಂಡಲಿಗೆ ಸೇರಿಸುತ್ತಿದ್ದನು" ASVಯಲ್ಲಿ "ಅವರ ಸಂಖ್ಯೆಗೆ ಸೇರಿಸಿದನು" (NASB) ಮತ್ತು "ಅವರ ಸಂಖ್ಯೆಗೆ ಸೇರಿಸಿದನು" (NIV).

"ಸಭೆ" ಮತ್ತು ಸಭೆಗಳು ಎಂಬದನ್ನು ಹೊಸ ಒಡಂಬಡಿಕೆಯಲ್ಲಿ 114 ಸಾರಿ ನೋಡುತ್ತೇವೆ, ಪ್ರಕಟನೆಯಲ್ಲಿಯೇ, 20 ಸಾರಿ ನೋಡುತ್ತೇವೆ. ಸತ್ಯವೇದದ ವಿದ್ಯಾರ್ಥಿಗಳಿಗೆ ಇದು ಬಹು ಪ್ರಮುಖವಾದ ಪದವಾಗಿದೆ. ಕ್ರಿ.ಶ. 33ರ ಪ್ರಪಂಚಕ್ಕೆ ಇದು ಅಪರೂಪದ ಪದವಾಗಿತ್ತು, ಯೇಸು ಕ್ರಿಸ್ತನ ಕಾರ್ಯದ ಮುಖಾಂತರ ಇದು ಕ್ರೈಸ್ತರ ಮನಸ್ಸಿಗೆ ಗೋಚರ ವಾಯಿತು; ಅದು ದೇವ ಜನರ ದೇಹ ಮತ್ತು ಆತನ ದೇಹವಾಗಿ, ಕರ್ತನ ಮೂಲಕವಾಗಿ ರಕ್ಷಣೆಯ ವಾಗ್ದಾನವನ್ನು ಮತ್ತು ನಿತ್ಯವಾದ ಪ್ರತಿಫಲವನ್ನು ನೀಡಿತು (ಎಫೆಸ 1:22, 23; 5:23).

ಅನೇಕ ಸ್ಥಳಗಳಿಲ್ಲಿ ಸಭೆಗಳು ಉಂಟಾದವು ಎಂದು ಅಪೊಸ್ತಲರ ಕೃತ್ಯಗಳು ಪುಸ್ತಕವು ಗೋಚರ ಪಡಿಸುತ್ತದೆ (ಅಪೊಸ್ತಲರ ಕೃತ್ಯಗಳು 9:31; 11:26; 14:23; 20:17). ಸುವಾರ್ತೆಯು ಸಾರಲ್ಪಟ್ಟ ಸ್ಥಳಗಳಲ್ಲಿ, ಅದನ್ನು ಕೇಳಿ, ನಂಬಿ ವಿಧೇಯರಾದವರು, ಅನ್ಯೋನ್ಯತೆಗೆ ಸೇರಿ ಬಂದಾಗ ಅದನ್ನು "ಸಭೆ" ಎಂದು ಕರೆದರು. ಅಪೊಸ್ತಲರ ಕೃತ್ಯಗಳು ಇದರ ಸಾಧನೆಯ ಇತಿಹಾಸವನ್ನು ಪ್ರಚುರಪಡಿಸುತ್ತದೆ.

## ವಿಶೇಷವಾದ ಒಂದು ಸಂಗತಿ

"ಸಭೆ" ಎಂಬ ಪದಕ್ಕೆಗ್ರೀಕ್ ಭಾಷೆಯ ಜೋಡಿ ಪದಗಳನ್ನು ಬಳಸಿ, *"ಎಕ್‌ಲೀಸಿಯಾ"* ಅಂದರೆ *"ಎಕ್"*ನ ಅರ್ಥ "ಹೊರಗೆ" ಮತ್ತು *"ಕಲೀನ್"* ಅರ್ಥ. "ಕರೆ" ಎಂಬುದಾಗಿರುತ್ತದೆ. ಆದದರಿಂದ "ಎಕ್‌ಲೀಸಿಯಾ" ಪದದ ಅರ್ಥ "ಹೊರಗೆ ಕರೆಯಲ್ಪಟ್ಟವರು" ಎಂಬುದಾಗಿದೆ. ಇದನ್ನು ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಗುಂಪುಗಳಿಗೆ, ಮೊದಲ ಶತಮಾನದ ಜನರು ಈ ಪದ ಪ್ರಯೋಗ ಮಾಡುತ್ತಿದ್ದರು, ಅದರಲ್ಲಿ ಧಾರ್ಮಿಕ ಹಾಗೂ ಇತರೆ ಗುಂಪುಗಳೂ ಒಳಗೊಂಡಿರಬಹುದು. ಗ್ರೀಕ್ ಭಾಷೆಯ ಸರಳ ಪದವನ್ನು ಬಳಸಿ ಯೇಸು ನಿರಂತರವಾದ ಧಾರ್ಮಿಕ ಅರ್ಥವನ್ನು ನೀಡಿದನು.[2]

ಮೂಲದಲ್ಲಿ, *"ಎಕ್‌ಲೀಸಿಯಾ"* ಎಂಬ ಪದವು ಸಾಮಾನ್ಯವಾದ ಅರ್ಥವನ್ನು ನೀಡುತ್ತಿತ್ತು, ಅದು ಹಳ್ಳಿಯ ಅಥವಾ ಪಟ್ಟಣದ ಸಣ್ಣ ಸಮಿತಿಗೆ ಮೀಸಲಾದ ಸಾಮಾನ್ಯ ಪದ

ವಾಗಿತ್ತು. ನಾಯಕರುಗಳು "ಪ್ರತ್ಯೇಕವಾಗಿ ಕರೆಯಲ್ಪಟ್ಟಿದ್ದರು," ಅವರು ಜನ ಸಾಮಾನ್ಯರನ್ನು ಮಾರ್ಗದರ್ಶನ ಮಾಡುವ ಮುಖಂಡರಾಗಿದ್ದರು.

ಎರಡನೆಯದಾಗಿ "ಜನರು ಸಮೂಹವಾಗಿ" ಸೇರಿಬರುವದಕ್ಕೆ ಈ ಪದ ಪ್ರಯೋಗವಾಗುತ್ತಿತ್ತು; ಅದು ಯಾವುದೇ ವಿಧವಾದ ಸೇರಿಬರೋಣಕ್ಕೆ ಬಳಕೆಯಾಗುತ್ತಿತ್ತು. ಯಾವುದೇ ಒಂದು ಉದ್ದೇಶದ ಕಾರಣ ಜನರನ್ನು ಒಟ್ಟಾಗಿ ಸೇರಿಸುವಾಗ, ಆ ಜನ ಸಮೂಹಕ್ಕೆ "ಎಕ್‌ಲೀಸಿಯಾ" ಎಂಬ ಪದವನ್ನು ಬಳಸುತ್ತಿದ್ದರು. ಎಫೆಸದಲ್ಲಿ ಎದ್ದ ಮೂರು ದಂಗೆಯಲ್ಲೂ ಈ ಪದಪ್ರಯೋಗವಾಗಿದೆ, ದೇಮೆತ್ರಿಯನು ಪೌಲನಿಗೆ ವಿರುದ್ಧವಾಗಿ ಒಳಸಂಚುಮಾಡಿದಾಗ, ಜನರು ಒಟ್ಟಾಗಿ ಸೇರಿಬಂದರು (ಅಪೊಸ್ತಲರ ಕೃತ್ಯ ಗಳು 19:30, 32, 41). ಕಡೆಗೆ ಪಟ್ಟಣದ ಯಜಮಾನನು ಜನರನ್ನು ಸಮಾಧಾನ ಪಡಿಸಿ ಸಭೆಯನ್ನೂ ಮುರಿದನು. ಆ ಸಂದರ್ಭದಲ್ಲಿ ಸೇರಿ ಬಂದಿದ್ದ ನಿರ್ಧಿಷ್ಟವಾದ ಜನರಿಗೆ ಮಾತ್ರ *"ಎಕ್‌ಲೀಸಿಯಾ"* ಎಂಬ ಪದವನ್ನು ಬಳಸಲಾಗಿದೆ.

*"ಎಕ್‌ಲೀಸಿಯಾ"* ಎಂಬ ಆತ್ಮೀಕ ಪದದ ಬಳಕೆಯು ಬಹಳವಾಗಿವೆ. (1) ಯೇಸು ಯಾವುದನ್ನು ಕಟ್ಟುವೆನು ಎಂದು ಹೇಳಿರುವನೋ (ಮತ್ತಾಯ 16:18), ಮತ್ತು ಯಾವುದನ್ನು ತನ್ನ ದೇಹವೆಂದು ಸೂಚಿಸಿರುವನೋ (ಎಫೆಸ 1:22, 23). ಯಾವುದಕ್ಕಾಗಿ ಸತ್ತು ತನ್ನ ರಕ್ತದಿಂದ ಸಂಪಾದಿಸಿಕೊಂಡನೋ (ಅಪೊಸ್ತಲರ ಕೃತ್ಯಗಳು 20:28). ಮತ್ತು ಯಾವುದನ್ನು ತನ್ನ ಕನ್ಯೆಯೆಂದು ಸೂಚಿಸಿರುವನೋ (ಎಫೆಸ 5:22-33), ಅವುಗಳಿಗೆ ಈ ಪದವನ್ನು ಬಳಸಿರುವನು. ಈ ವಿಧವಾದ ಬಳಕೆಗೆ ಈ ಪದವನ್ನು ಉಪಯೋಗಿಸಿರುವಾಗ "ಇದು ಸಾರ್ವತ್ರಿಕ ಸಭೆ" ಎಂಬ ಅರ್ಥವನ್ನು ನೀಡುತ್ತದೆ. ಸಕಲ ಶತಮಾನದ, ಯಾವುದೇ ಜನರು, ಆತನ ವಿಶೇಷವಾದ ಸಂಬಂಧಕ್ಕೆ ಕರೆಯಲ್ಪಟ್ಟು, ಆತನ ದೇಹವಾಗಿದ್ದಾರೋ, ಅಂಥವರನ್ನು "ಕ್ರೈಸ್ತರು" ಎಂದು ಕರೆಯಲಾಗಿದೆ (ಅಪೊಸ್ತಲರ ಕೃತ್ಯಗಳು 11:26). ಇದು "ಒಂದು ದೇಹ" ಅದನ್ನು ಕರ್ತನಿಗೆ ಸೇರಿದ ಆತ್ಮೀಕ ಜನರ ದೇಹ ಎಂದು ಕರೆದಿರುವರು, ಅದರ ಕುರಿತಾಗಿ ಪೌಲನು, "ಕ್ರಿಸ್ತನಿಗೆ ಮೀಸಲಾದ ಸಭೆ" ಎಂಬ ಸತ್ಯವನ್ನು ಬರೆದಿರುವನು (ಎಫೆಸ 4:4). ಇಂಥಹ ಸಭೆಯು ಸಂಸ್ಥಾಪನೆಗೊಳ್ಳುವ ಮುನ್ನ ಅಬ್ರಾಹಾಮ, ಮೋಶೆ, ದಾವೀದ ದಾನಿಯೇಲ, ಮತ್ತು ಇತರೆ ಹಳೇ ಒಡಂಬಡಿಕೆಯ ಸ್ತ್ರೀ ಪುರುಷರು ಜೀವಿಸಿದ್ದರೂ, ಅವರುಗಳು ನಂಬಿಕೆಯನ್ನು ಹೊಂದಿದ್ದರೂ, ಅವರು ಕರ್ತನ ಸಭೆಗೆ ಸದಸ್ಯರಾಗುವದು ಅಸಾಧ್ಯವಾಯಿತು, ಅವರನ್ನು ಕ್ರೈಸ್ತರು ಎಂದು ಸಂಭೋಧಿಸುವದು ವಿಹಿತವಾಗುವದಿಲ್ಲ.

(2) ಎರಡನೆಯದಾಗಿ, ಸ್ಥಳೀಯವಾಗಿ ಸೇರಿ ಬರುವ ಚಿಕ್ಕ ಗುಂಪುಗಳಿಗೂ, *"ಎಕ್‌ಲೀಸಿಯಾ"* ಎಂಬ ಪದವು ಅನ್ವಯಿಸುತ್ತದೆ, ಅದು ಸ್ಥಳೀಯವಾಗಿ ಸುವಾರ್ತೆ ಸಾರಿರುವದರಿಂದ ಸ್ಥಾಪನೆಗೊಂಡಿರಬಹುದು. ಸುವಾರ್ತೆಯನ್ನು ಸಾರಿದ ಸ್ಥಳಗಳಲ್ಲಿ, ಜನರು ಅದಕ್ಕೆ ಸ್ಪಂದಿಸಿದಾಗ, "ಸಭೆಗಳು" ಸ್ಥಾಪನೆಗೊಂಡವು. ಹೊಸ ಒಡಂಬಡಿಕೆಯಲ್ಲಿ ಈ ಪದಗಳನ್ನು ಸಾಮಾನ್ಯವಾಗಿ ಬಳಸಲಾಗಿದೆ.

ಇವುಗಳು ವಿಭಿನ್ನವಾದ ಸಂಘ ಸಂಸ್ಥೆಗಳಾಗಿರಲಿಲ್ಲ, ಈ ದಿವಸಗಳಲ್ಲಿ ಜನರು "ಸಭೆ" ಎಂಬ ಈ ಪದವನ್ನು ಸಕಲ ಗುಂಪುಗಳಿಗೂ ಬಳಸುತ್ತಾರೆ, ಆದರೆ ಸಭೆಗಳು, ಸಾರ್ವತ್ರಿಕ ಸಭೆಯ ಗುಂಪುಗಳಾಗಿದ್ದು, ಇದನ್ನು ಮಾತ್ರ "ಒಂದೇ ಸಭೆ" ಎಂದು ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ಈ ದಿನಗಳಲ್ಲಿ ಪ್ರಚಲಿತವಿರುವ ಯಾವುದೇ ವಿಧವಾದ ಸಂಸ್ಥೆಯನ್ನು ಸೃಷ್ಟಿಸಲಿಲ್ಲ; ಅವೆಲ್ಲವುಗಳು ಮನುಷ್ಯರಿಂದಲೇ ಆರಂಭಗೊಂಡವು, ಯಾವುದೇ ಸಂಸ್ಥೆಯನ್ನು ಖರೀದಿಸಲು ಯೇಸು ಮರಣವನ್ನು ಹೊಂದಲಿಲ್ಲ, ತನ್ನ ಸಭೆಯನ್ನು ಸಂಪಾಧಿಸಿಕೊಳ್ಳಲು ಯೇಸು ಸತ್ತನು. ಸಂಸ್ಥೆಯನ್ನು ರಕ್ಷಿಸುತ್ತೇನೆ ಎಂದು ಯೇಸು ವಾಗ್ದಾನ ಮಾಡಿರುವದಿಲ್ಲ, ಆತನು ತನ್ನ ಸ್ವಂತ ಆತ್ಮೀಕ ದೇಹಕ್ಕೆ ಮಾತ್ರ ರಕ್ಷಕನಾಗಿದ್ದಾನೆ (ಎಫೆಸ 5:23). ಮತ ಶಾಖೆಗಳು ಆತ್ಮೀಕ ದೇಹವಾಗುವದಕ್ಕೆ ಸಾಧ್ಯವಿಲ್ಲ; ಅವುಗಳು ಸತ್ಯವೇದದಲ್ಲಿ ಇರುವದಿಲ್ಲ.

(3) ಸ್ಥಳೀಯವಾಗಿ, ದೇವ ಜನರು ಕೂಡಿ ಬರುವಿಕೆಗೆ *"ಎಕ್‌ಲೀಸಿಯಾ"* ಎಂಬ ಪದವನ್ನು ಬಳಸಲಾಗಿದೆ (ಅಪೊಸ್ತಲರ ಕೃತ್ಯಗಳು 14:27; 1 ಕೊರಿಂಥ 11:18; 14:23, 28, 33). ಕೊರಿಂಥ ಸಭೆಯಲ್ಲಿ ಉಂಟಾದ ಕೆಲವು ನಿಂದನೆಗಳನ್ನು ಪೌಲನು ಕ್ರಮಪಡಿಸಿದನು. ಮುಖ್ಯವಾಗಿ ಅಧ್ಯಾಯ 14ರಲ್ಲಿ, ಅವರ ಸಭೆಯು ಸಾಮಾನ್ಯ ಕೂಡಿ ಬರುವಿಕೆಯಲ್ಲಿ, ಬಳಸಬಹುದಾದ ಅದ್ಭುತ ವರಗಳ ಕುರಿತು ತಿಳಿಸಿರುವನು. ಕೊರಿಂಥ ಸಭೆಯಲ್ಲಿ ಅವರು ಆರಾಧಿಸುವವರಾಗಿರಬೇಕೆಂದು, ಆ ಸಭೆಯನ್ನು ಕುರಿತು ಪೌಲನು "ಎಕ್‌ಲೀಸಿಯಾ" ಎಂಬ ಪದವನ್ನು ಬಳಸಿರುವನು ಅವರು ಒಟ್ಟಾಗಿ ಸೇರಿ ಬರಬೇಕು, ಆರಾಧನೆಯ ನಂತರ ತಮ್ಮ ಮನೆಗಳಿಗೆ ಹಿಂದಿರುಗಬೇಕು. ಈ ವಿಧವಾಗಿ ಸೇರಿ ಬರುವಾಗ, ಮಾತ್ರ ಅವರು "ಎಕ್‌ಲೀ ಸಿಯಾ" ಎಂದು ಕರೆಯಲ್ಪಡುತ್ತಿದ್ದು,

ಇವುಗಳು "ಸಭೆಗೆ" ಇರುವ ಸಾಮಾನ್ಯ ಕರೆಯಾಗಿದೆ.[3] ಹೊಸ ಒಡಂಬಡಿಕೆಯಲ್ಲಿನ ಈ ಪ್ರಾಯೋಗವನ್ನು ಗಮನಿಸುವಲ್ಲಿ, ವಿದ್ಯಾರ್ಥಿಗಳು ಎಚ್ಚರ ವಹಿಸಬೇಕು. ಪದಗಳು ವಿಭಿನ್ನವಾದ ಹಿನ್ನೆಲೆಯಲ್ಲಿ ವಿಧವಿಧವಾದ ಅರ್ಥವನ್ನು ನೀಡುವದರಿಂದ, ಆತುರದಿಂದ ಓದಬಾರದೆಂದು ಶಿಫಾರಸ್ಸು ಮಾಡಲಾಗಿದೆ.

## ಸಾರ್ವತ್ರಿಕವಾದ ಒಂದು ಸಂಗತಿ

ಯೆರೂಸಲೇಮಿನಲ್ಲಿ ಕರ್ತನ ಪ್ರಥಮ ಸಭೆಯು ಸ್ಥಾಪನೆಗೊಂಡಿತ್ತು (ಅಪೊಸ್ತರ ಕೃತ್ಯಗಳು 2:41, 47; 8:1), ಮತ್ತು ನಂತರ ಸಿರಿಯದ ಅಂತಿಯೋಕ್ಯದಲ್ಲಿ, ಇದೇ ವಿಧದ ಮತ್ತೊಂದು ಸಭೆಯು ಸ್ಥಾಪನೆಗೊಂಡಿತು (ಅಪೊಸ್ತರ ಕೃತ್ಯಗಳು 11:25, 26). ನಂತರದಲ್ಲಿ (ಅಪೊಸ್ತರ ಕೃತ್ಯಗಳು 1:8), ಕರ್ತನ ಯೋಜನೆಯಂತೆ ಯುದಾಯ, ಗಲಿಲಾಯ, ಮತ್ತು ಸಮಾರ್ಯದಲ್ಲಿ ಸಭೆಗಳು ಸ್ಥಾಪನೆಗೊಂಡವು (ಅಪೊಸ್ತಲರ ಕೃತ್ಯಗಳು 9:31). ಪೌಲನ ಪ್ರಥಮ ಸೇವಾ ಪ್ರಯಾಣದಲ್ಲಿ ಪಿಸಿದ್ಯಯದ ಅಂತಿಯೋಕ್ಯ, ಇಕೋನ್ಯಾ, ಲುಸ್ತ್ರ, ಹಾಗೂ ದರ್ಬೆಯಲ್ಲಿ ಸಭೆ ಸ್ಥಾಪನೆಗೊಂಡವು (ಅಪೊಸ್ತಲರ ಕೃತ್ಯಗಳು 14:20-23). ಎರಡನೆ ಪ್ರಯಾಣದ ಆರಂಭದಲ್ಲಿ ಸಿರಿಯ ಮತ್ತು ಕಿಲಿಕ್ಯ ಪ್ರಾಂತಗಳಲ್ಲಿ ಸಭೆಗಳು ಸ್ಥಾಪನೆಗೊಂಡವು (ಅಪೊಸ್ತಲರ ಕೃತ್ಯಗಳು 15:41).

ಶೀಘ್ರವೇ ಸಭೆಗಳು ಕೊರಿಂಥದಲ್ಲಿ (ಅಪೊಸ್ತರ ಕೃತ್ಯಗಳು 18:8; 1 ಕೊರಿಂಥ 1:1, 2); ಎಫೆಸದಲ್ಲಿ (ಅಪೊಸ್ತಲರ ಕೃತ್ಯಗಳು 20:17, 28; ಪ್ರಕಟನೆ 2:1); ಥೆಸಲೋನಿಕದಲ್ಲಿ (1 ಥೆಸಲೋನಿಕ 1:1); ರೋಮಾಯದಲ್ಲಿ (ರೋಮಾಪುರ 16:5); ಫಿಲಿಪ್ಪಿಯಲ್ಲಿ (ಫಿಲಿಪ್ಪಿ 4:15); ಆಸ್ಯ ಸೀಮೆಯ ಇತರೆ 6 ಪಟ್ಟಣಗಳಾದ, ಸಲ್ಮಾರ್ನ, ಪೆರ್ಗಮ, ಥುವಥೈರ, ಸಾರ್ಧಿಸ್, ಫಿಲಿಡೇಲ್ಫಿಯ, ಹಾಗೂ ಲವೋದಿಕೇಯ (ಪ್ರಕಟನೆ 2 ಮತ್ತು 3) ಹಾಗೂ ಗಲಾತ್ಯ ಸೀಮೆ ಯಲ್ಲಿ ಅನೇಕ ಸಭೆಗಳು ಗುರುತಿಸಲ್ಪಟ್ಟವು (1 ಕೊರಿಂಥ 16:1). ದಮಸ್ಕದಲ್ಲಿಯೂ ಒಂದು ಸಭೆಯಿತ್ತು, ಯಾಕೆಂದರೆ ಪೌಲನು ಅಲ್ಲಿ ಶಿಷ್ಯರನ್ನು ಸಂಧಿಸಿದನು ಎಂಬದರಿಂದ ಅರಿಯಬಹುದು (ಅಪೊಸ್ತಲರ ಕೃತ್ಯಗಳು 9:10, 19ಬಿ, 25).

## ಸ್ವಾಭಾವಿಕವಾದ ಒಂದು ಸಂಗತಿ

ಪೇತ್ರ ಮತ್ತು ಅಪೊಸ್ತಲರು ಪೂರ್ಣವಾದ ಸುವಾರ್ತೆಯನ್ನು ಯೆರೂಸಲೇಮಿ ನಲ್ಲಿ ಸಾರಿದರು (ಅಪೊಸ್ತಲರ ಕೃತ್ಯಗಳು 2). ಫಿಲಿಪ್ಪನು ಸಮಾರ್ಯದಲ್ಲಿ ಸುವಾರ್ತೆ ಸಾರಿದನು (ಅಪೊಸ್ತಲರ ಕೃತ್ಯಗಳು 8:5), ಮತ್ತು ಚದರಿ ಹೋದ ಶಿಷ್ಯರುಗಳು ಸಿರಿಯದ ಅಂತಿಯೋಕ್ಯದವರೆಗೆ ಸುವಾರ್ತೆಯನ್ನು ಪ್ರಸಾರಣೆ ಮಾಡಿದರು (ಅಪೊಸ್ತಲರ ಕೃತ್ಯಗಳು 11:19-21). ಪೌಲನು ತನ್ನ ಪ್ರಥಮ ಸೇವಾ ಪ್ರಯಾಣದ ಅವಧಿಯಲ್ಲಿ, ಆಸ್ಯ ಸೀಮೆಗೆ ಸುವಾರ್ತೆಯನ್ನು ಕೊಂಡೊಯ್ದನು (ಅಪೊಸ್ತರ ಕೃತ್ಯಗಳು 13; 14) ಅವನ ಅಂತಿಯೋಕ್ಯ,

ಇಕೋನ್ಯ, ಲುಸ್ತ್ರ ಹಾಗೂ ದೆರ್ಬೆಯಲ್ಲಿ ಬೋಧಿಸಿದನು.

ಪೌಲ, ಸೀಲ ಹಾಗೂ ತಿಮೊಥೆಯರು ಕೊರಿಂಥದಲ್ಲಿ ಸತ್ಯವನ್ನು ಬೋಧಿಸಿದರು (ಅಪೊಸ್ತಲರ ಕೃತ್ಯಗಳು 18:1-11), ಹಾಗೂ ಥೆಸಲೋನಿಕೆಯವರು ಅವರನ್ನು ಯಥಾರ್ಥರೆಂದು ಸಂತೋಷವಾಗಿ ಸ್ವೀಕರಿಸಿ, ಅವರು ಬೋಧಿಸಿದ ಸತ್ಯಗಳು ದೇವರಿಂದ ಬಂದವೆಂದು ಅಂಗೀಕರಿಸಿದರು (1 ಥೆಸಲೋನಿಕ 2:13). ಪೌಲನು ಎಫೆಸದಲ್ಲಿ ಮೂರು ವರ್ಷಗಳ ಕಾಲ ಸೇವೆಸಲ್ಲಿಸುವ ಸಂದರ್ಭದಲ್ಲಿ, ಆಸ್ಯಸೀಮೆಯ ಇತರೆ ಮೂರು ಸ್ಥಳಗಳಲ್ಲಿ ಜನರು ಸುವಾರ್ತೆಯನ್ನು ಕೇಳಿದರು (ಅಪೊಸ್ತಲರ ಕೃತ್ಯಗಳು 19:10; 20:31).

ದೇವರ ವಾಕ್ಯದ ಬೀಜವನ್ನು ಬಿತ್ತುವ ಮೂಲಕ ಇತರೆ ಸ್ಥಳಗಳಲ್ಲಿ ದೇವರ ರಾಜ್ಯದ ಜನರು ಉಂಟಾದರು (ಲೂಕ 8:11). ದೇವರ ವಾಕ್ಯವನ್ನು ಅಂಗಿಕರಿಸುವ ಯಥಾರ್ಥರನ್ನು ಕಂಡುಕೊಂಡು ಅವರಿಗೆ ಸುವಾರ್ತಿಕರು ಸುವಾರ್ತೆಯನ್ನು ತಿಳಿಸು ವಾಗ, ದೇವರ ರಾಜ್ಯವು ಬಿತ್ತಲ್ಪಟ್ಟು, ಹೂವಾಗಿ ಅರಳಿ, ಸುಗ್ಗಿಯಾಗಿ ಬೆಳೆಯಿತು.

## ನಿತ್ಯವಾದ ಒಂದು ಸಂಗತಿ

ಕರ್ತನಾದ ಯೇಸು ಕ್ರಿಸ್ತನಲ್ಲಿ, ದೇವರ ನಿತ್ಯವಾದ ಯೋಜನೆಯೇ, ಪರಿಣಾಮವೇ "ಸಭೆಯಾಗಿದೆ" (ಎಫೆಸ 1:3-6; 3:10). ಯೇಸುವಿನ ವಾಗ್ದಾನದ ಪ್ರತಿಫಲವೇ "ಸಭೆಯಾಗಿದೆ" (ಮತ್ತಾಯ 16:18) ಆತನ ಮರಣದ ಮುಖಾಂತರ, ಅವರನ್ನು ತನಗಾಗಿ ಕೊಂಡುಕೊಂಡನು (ಅಪೊಸ್ತಲರ ಕೃತ್ಯಗಳು 20:28; 1 ಪೇತ್ರ 1:18, 19). ಈ ಜನರು ಯೇಸುವಿಗೆ ಅಧೀನರಾಗಿ ಸಭೆಯೆಂಬ ದೇಹಕ್ಕೆ ಶಿರಸ್ಸಾದ ಯೇಸುವಿಗೆ ಒಳಗಾದರು (ಎಫೆಸ 1:22, 23). ಅವರು ಮಾತ್ರ ಕ್ರಿಸ್ತನಿಗೆ ವಿಧೇಯರಾದರು (ಎಫೆಸ 5:23).

ಸಭೆಯಲ್ಲಿ ಸೇರಿ ಬಂದವರ ಮೂಲಕವಾಗಿ ದೇವರ ನಿತ್ಯವಾದ ಯೋಜನೆಯು ಉದ್ದೇಶವು ನೆರವೇರುತ್ತದೆ (ಎಫೆಸ 1:23). ಅವರುಗಳು ಮಾತ್ರ ಕರ್ತನು ಮೆಚ್ಚುವಂಥ ಮಹಿಮೆಯನ್ನು ಸಮರ್ಪಿಸುವದಕ್ಕೆ ಸಾಮರ್ಥ್ಯವನ್ನು ಹೊಂದಿರುವರು (ಎಫೆಸ 3:21). ಅವರು ಮಾತ್ರ ದೇವರಿಗೆ ಯೋಗ್ಯವಾದ ಆರಾಧನೆಯ ಯಜ್ಞವನ್ನು ಸಮರ್ಪಿಸುವ ಯಾಜಕ ರಾಗಿರುವರು ಅವರು ಆರಿಸಲ್ಪಟ್ಟವರು, ರಾಜ ವಂಶಸ್ಥರಾದ ಯಾಜಕರು, ಪರಿಶುದ್ಧ ಜನಾಂಗ, ದೇವರಿಗೆ ಮೀಸಲಾದ ಜನರೂ ಆಗಿರುವರು, ಅವರು ಮಾತ್ರ ದೇವರ ಪರಿಪೂರ್ಣವಾದ ಕರುಣೆಯನ್ನು ಹೊಂದಿದವರಾಗಿರುವರು (1 ಪೇತ್ರ 2:5, 9, 10).

ಕರ್ತನ ಸಭೆಯ ಸದಸ್ಯರುಗಳು, ವಿಶೇಷವಾದವರೇ - ಅದು ಅವರ ಸ್ವಂತ ಸಾಮರ್ಥ್ಯದಿಂದ ಬಂದದಲ್ಲ. ಅವರು ಅರಸನ ಚಿತ್ತಕ್ಕೆ ಒಳಗಾದ್ದರಿಂದಲೂ, ನಂಬಿಗಸ್ತರಾಗಿ ಅಂತ್ಯದವರೆಗೆ ಜೀವಿಸಲು ಸಿದ್ಧರಾದ್ದರಿಂದ ಉಂಟಾಯಿತು. ಅವರು ಯೇಸುವಿನ ರಕ್ತದಿಂದ ತೊಳೆಯಲ್ಪಟ್ಟಿರುವವರು (ಎಫೆಸ 5:26), ಅವರು ಆತನ ಬರೋಣಕ್ಕಾಗಿ ಹಾರೈಸುವವರೂ ಆಗಿರುವರು. ಅವರು ದೇವರ ಕುಟುಂಬದವರಾಗಿರುವದರಿಂದ, ಆತನು ಬರುವಾಗ ಆತನ ಮಕ್ಕಳ ಪದವಿಯನ್ನು ಹೊಂದುವರು (1 ತಿಮೊಥೆ 3:15; 1 ಯೋಹಾನ 3:1).

## ಮುಕ್ತಾಯ

ಅಪೊಸ್ತಲರ ಕೃತ್ಯದಲ್ಲಿ ಬಹು ವಿಶೇಷವಾದ ಕಾರ್ಯವು ಜರುಗಿತ್ತು, ಯುಗಗಳನ್ನೇ ಬದಲು ಮಾಡುವ ಉತ್ತುಂಗ (1 ಕೊರಿಂಥ 10:11). ಕ್ರಿಸ್ತನ ಮರಣದ ನಂತರ ಜೀವಿಸಿದವರ, ಇತಿಹಾಸದಲ್ಲಿ ಬಹಳ ಆಶೀರ್ವಾದಹೊಂದಿದವರಾಗಿರುವರು. ಸತ್ಯವೇದವನ್ನು ಓದುವವರು, ದಿನಗಳಲ್ಲಿ ದೇವರ ಇತಿಹಾಸವನ್ನು ನೋಡಿ, ದೇವರು ನೀತಿಯನ್ನು ಹೇಗೆ ಸ್ಥಾಪನೆ ಮಾಡಿದನೆಂಬುದಾಗಿ ಅರಿತು ಕೊಳ್ಳುವ ಸಾಧ್ಯತೆಯಿದೆ. ಈ ಪುರಾತನವಾದ ಚರಿತ್ರೆಯನ್ನು ಧ್ಯಾನಿಸುವ ಮೂಲಕ ಹೃದಯಗಳಲ್ಲಿ ನಿರೀಕ್ಷೆಯು ಸ್ಥಾಪನೆಗೊಳ್ಳಲು ಸಾಧ್ಯವಿದೆ

(ರೋಮಾಪುರ 15:4). ದೇವರು ಪಾಪಿಗಳಿಗೆ ರಕ್ಷಣೆಯನ್ನು ದಯಪಾಲಿಸಲು ನಿತ್ಯವಾದ ಯೋಜನೆಯನ್ನು ಹೊಂದಿರುವನು, ಮತ್ತು ಅದನ್ನು ನೆರವೇರಿಸಿರುವನು. ದೇವರು ಈ ರಕ್ಷಣೆಯನ್ನು, ಯಾವಾಗ, ಎಲ್ಲಿ ಮತ್ತು ಹೇಗೆ ಸಾಧಿಸಿದನು ಎಂದು ತಿಳಿಸುವ ಅಮೋಘ ಪುಸ್ತಕವು ಇದಾಗಿರುತ್ತದೆ.

ದೇವರು ನೀಡಿದ ರಕ್ಷಣೆಯ ಮಹಾಸಮಯವು ಬಂದಾಗ, ಯೇಸು ತನ್ನ ಸಭೆಯನ್ನು ಸ್ಥಾಪಿಸುವನೆಂಬ ವಾಗ್ದಾನವನ್ನು ಮಾಡಿದ್ದನು. ಈ ಆತ್ಮೀಕ ವ್ಯವಹಾರದ ಕುರಿತು ತಿಳಿಸಲು ಆತನು ಪಾಲಿಸ್ತೇನಿನಲ್ಲಿ ಮೂರು ವರ್ಷಗಳ ಕಾಲ ಸಂಚರಿಸಿದನು, ಮತ್ತು ಈ ಕಾರ್ಯಕ್ಕಾಗಿ ಹನ್ನೆರಡು ಜನರನ್ನು ತರಬೇತು ಗೊಳಿಸಿದನು. ಇವರ ಮೂಲಕವಾಗಿ ಸಭಾ ಸ್ಥಾಪನೆಯನ್ನು ಅದರ ವೃದ್ಧಿಯ ಕಾರ್ಯವನ್ನು ಈಡೇರಿಸಿದನು, ಅದು ಪ್ರಥಮ ಶತಮಾನದಲ್ಲೇ ನೆರವೇರಿತು. ಯೇಸು ತನ್ನ ಸಭೆಯನ್ನು ಕಟ್ಟಿದನು - ಅಪೊಸ್ತಲರು ಪವಿತ್ರಾತ್ಮದಿಂದ ಅಭಿಷೇಕ ಹೊಂದಿದವರಾಗಿ, ಅವರು ಯಾವುದಕ್ಕಾಗಿ ತರಬೇತು ಪಡೆದಿದ್ದರೋ, ಆ ಕಾರ್ಯವನ್ನು ಈಡೇರಿಸಿದರು. "ಪಾತಾಳಲೋಕದ ಬಲವು ಅದನ್ನು ಸೋಲಿಸಲಿಲ್ಲ" (ಮತ್ತಾಯ 16:18), ಮತ್ತು ಸೈತಾನನು ಅದಕ್ಕೆ ವಿರೋಧಿಸಲಿಲ್ಲ. ಹೊಸ ಒಡಂಬಡಿಕೆಯ ಕಾಲದಲ್ಲಿ ಸಭೆಯು ಜೀವಂತವಾಗಿತ್ತು, ಅದು ನ್ಯಾಯತೀರ್ಪಿನ ದಿವಸದವರೆಗೆ ಮುಂದುವರಿಯುತ್ತದೆ. ಈ ಅಪರಿಮಿತವಾದ ಜಯದ ಕುರಿತಾಗಿಯೇ, ಅಪೊಸ್ತಲರ ಪುಸ್ತಕವು ಬರೆಯಲ್ಪಟ್ಟಿದೆ.

---

ಟಿಪ್ಪಣಿಗಳು

[1]ಅಪೊಸ್ತಲರ ಕೃತ್ಯಗಳು 2:47ರಲ್ಲಿ KJV ಯಲ್ಲಿ "ಸಭೆಯೆಂಬ" ಪದವು ಸಿದ್ಧಾಂತ ಪರ ವಾದ ತಪ್ಪನ್ನು ಪರಿಚಯಮಾಡಲಿಲ್ಲ ಬೆಂತಕೋಸ್ ಹಬ್ಬದ ದಿನದಂದು ಸುವಾರ್ತೆಗೆ ವಿಧೇಯರಾದ ಯೆಹೂದ್ಯರ ಗುಂಪನ್ನು "ಸಭೆ" ಎಂದು ಕರೆಯಲಾಗಿತ್ತು (ಅಪೊಸ್ತಲರ ಕೃತ್ಯಗಳು 5:11; 8:1, 3). [2]ದೀಕ್ಷಾಸ್ನಾನ ಎಂಬ ಗ್ರೀಕ್ ಪದಕ್ಕೆ ಸಮಾನ್ಯವಾದ ಪದವನ್ನು ಯೇಸು ಬಳಸಿದರು. ಆ ಪದದ ಅರ್ಥವು "ಮುಳುಗಿಸು, ಸ್ನಾನ" ಎಂಬುದು ಈ ಪದವು ಸಾಮಾನ್ಯವಾಗಿ ವಸ್ತ್ರ ನೇಯುವವರ ಕರ್ಮಗಾರಿಯಲ್ಲಿ ಉಪಯೋಗಿಸುವವರು. ಇಂಗ್ಲೇಡ್ ಸಭೆಯಲ್ಲಿ ಚುಮುಕಿಸುವುದು ಬಳಕೆಯಲ್ಲಿದ್ದರಿಂದ ದೀಕ್ಷಾಸ್ನಾಕ್ಕೆ "ಬಾಪ್ತಿಸ್ಮ" ಎಂಬ ಪದವನ್ನು ಕಂಡು ಹಿಡಿದರು. [3]Ekklesia ಎಂಬ ಪದವು ಈ ಮೂರು ವಿಧಾನದಲ್ಲಿ ಅಲ್ಲದೆ ವಿಶೇಷವಾದ ರೂಪದಲ್ಲಿ ಮತ್ತೊಂದು ಸಲ ಪ್ರಯೋಜಿಸಲಾಗಿದೆ. ಅದು ಸ್ಟೇಫನನು "ಅಡವಿಯಲಿದ್ದ ಸಭೆ" ಎಂದು ಸೂಚಿಸಿದಾಗ ಉಪಯೋಗಿಸಲಾಗಿದೆ (ಅಪೊಸ್ತಲರ ಕೃತ್ಯಗಳು 7:38). ಈ ಸಂದರ್ಭದಲ್ಲಿ ಸ್ಟೇಫನನು ಸಿನಾಯಿಯ ಅರಣ್ಯದಲ್ಲಿ ಯೂದರು ಸಭೆಯಾಗಿ ಸೇರಿ ದೇವರ ಉದ್ದೇಶ ಪ್ರಕಾರ ಐಗುಪ್ತದ ದಾಸ್ಯದಿಂದ ಹೊರಟು ವಾಗ್ದಾನ ಭೂಮಿಯಾದ ಕಾನಾನು ದೇಶಕ್ಕೆ ಪ್ರಯಾಣಮಾಡುವದನ್ನು ಸೂಚಿಸುತ್ತದೆ.